**ದಿನಾಂಕಃ 23.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಗರುಡಾಬೋವಿಯಾದ ನನ್ನ ತಂದೆ ನನ್ನ ವಿರುದ್ದ ಪ್ರಸ್ತುತ ದಾವೆ ಹಾಕಿರುತ್ತಾರೆ. ದಾವಾ ಸ್ವತ್ತು ಖಾತೆ ನಂಬರ್ ಹಳೆ ನಂಬರ್ 118 ಆಗಿದ್ದು ಹೊಸ ಸಂಖ್ಯೆ 183 ಆಗಿದ್ದು ಪೂರ್ವ ಪಶ್ಚಿಮ 21 ಅಡಿ, ಉತ್ತರ ದಕ್ಷಿಣ 75 ಅಡಿ ಇರುತ್ತದೆ. ಪೂರ್ವಕ್ಕೆ ರಾಮಾಬೋವಿ, ಪಶ್ಚಿಮಕ್ಕೆ ನಮ್ಮದೇ ಜಮೀನು, ಉತ್ತರಕ್ಕೆ ಮಲ್ಲಪ್ಪ ಹಾಗೂ ದಕ್ಷಿಣಕ್ಕೆ ರಾಜಬೀದಿ ಇರುತ್ತದೆ. ಸದರಿ ಸ್ವತ್ತಿನ ವಿವರಣೆಯನ್ನು ನಾನು ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಪ್ರತಿವಾದ ಪತ್ರದಲ್ಲಿ ನಮಗೆ ಸೇರಿರುವ ಖಾತೆ ಸಂಖ್ಯೆ ಅಥಾವಾ ವಿಸ್ತೀರ್ಣ ಯಾವುದನ್ನು ಬರೆಸಿರುವುದಿಲ್ಲ ಎಂದರೆ ನಾನು ಈ ರೀತಿ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಬರೆಯಿಸಿ ಹಾಜರು ಪಡಿಸಿರುತ್ತೇನೆ. ಅದರಲ್ಲಿ ನನ್ನ ಸ್ವತ್ತಿನ ಖಾತೆ ನಂಬರ್ ಹಾಗೂ ವಿಸ್ತೀರ್ಣದ ಬಗ್ಗೆ ಹೇಳಿರುತ್ತೇನೆ.

2. ಸದರಿ ಸ್ವತ್ತನ್ನು ದಿಃ04.04.1956 ರಲ್ಲಿ ನನ್ನ ತಂದೆ ಖರೀದಿ ಮಾಡಿರುತ್ತಾರೆ. ಈ ವಿಚಾರವಾಗಿ ನಾನು ಖರೀದಿ ಪತ್ರ, ಬೋಗ್ಯದ ಪತ್ರ, ಇಸಿ ಹಾಗೂ ಆದೇಶದ ಪುಟ ಹಾಜರು ಪಡಿಸಿರುತ್ತೇನೆ. ಸದರಿ ನಿಡಿ-1 ಬೋಗ್ಯದ ಪತ್ರಕ್ಕೆ ಹಾಗೂ ಪ್ರಸ್ತುತ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿಯು ಬೋಗ್ಯ ಬೇರೆಯವರಿಗೆ ಆಗಿದ್ದು ಆ ಬೋಗ್ಯದ ಮೊತ್ತವನ್ನು ನನ್ನ ತಂದೆ ತೀರಿಸಿ ಅದರ ಮುಖಾಂತರ ಕ್ರಯ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ನಾನು ಇನ್ನು ಹುಟ್ಟಿರುವುದಿಲ್ಲ ಆದರೆ ದಾಖಲಾತಿಗಳು ಇರುತ್ತದೆ. ನಾನು ಆಗ ಹುಟ್ಟಿರದ ಕಾರಣ ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ.

3. ನಿಡಿ-2 ರಲ್ಲಿ ಸ್ವತ್ತಿನ ವಿಸ್ತೀರ್ಣ ಇರುವುದಿಲ್ಲ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-2 ರ ದಾಖಲೆಯನ್ನು ನೋಡಿ ಹೇಳುವಂತೆ ವಾದಿಯ ಪರ ವಕೀಲರು ಕೇಳಿದಾಗ ಸಾಕ್ಷಿಯು ಪತ್ರವನ್ನು ಓದಿ ಅದರಲ್ಲಿ ಚಕ್ಕುಬಂದಿ ಇರುತ್ತದೆ ಆದರೆ ಅಳತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವೆ ಹಾಕಿರುವ ಗೋಪಾಲಬೋವಿ ಇವರಿಗೆ ಸಂಬಂಧಿಸಿದಂತೆ ಖಾನೇಷುಮಾರಿ ಸಂಖ್ಯೆ 7/183 ಹಾಗೂ ಹಳೆ ಸಂಖ್ಯೆ 126 ಇದು ಸದರಿಯವರಿಗೆ ಸೇರಿರುತ್ತದೆಂದರೆ ಸಾಕ್ಷಿಯು ಅದು ಸರಿಯಲ್ಲ 185/183 ಅವರ ಓರಿಜಿನಲ್ ಸಂಖ್ಯೆಯಾಗಿದ್ದು ಇದು ಹೊಸ ಸಂಖ್ಯೆ ಎಂದು ಈ ರೀತಿ ಸ್ವತ್ತು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅದರ ವಿಸ್ತೀರ್ಣ ಪೂರ್ವ ಪಶ್ಚಿಮ 21 ಅಡಿ ಉತ್ತರ ದಕ್ಷಿಣ 75 ಅಡಿ ಎಂದರೆ ಸರಿ. ಸದರಿ ವಿಸ್ತೀರ್ಣದಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆಂದರೆ ಸಾಕ್ಷಿ ನಾವು ಇದ್ದೇವೆಂದು ನುಡಿಯುತ್ತಾರೆ. ಈ ಸಂಬಂಧ ಸುಳ್ಳು ಸಾಕ್ಯೆ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4. ಸ್ವತ್ತಿನ ಸಂಬಂಧ ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರಾಕ್ಟ್ ಹಾಗೂ ಕಂದಾಯ ದಾಖಲಾತಿಗಳನ್ನು ನಾನು ಸಲ್ಲಿಸಿರುವುದಿಲ್ಲ. ಈ ಸಬಂಧ ವರ್ಷಾವಾರು ಖಾತೆ ಸಲ್ಲಿಸಿರುತ್ತೇನಾ ಎಂದರೆ ಸಾಕ್ಷಿಯು ನನ್ನ ತಂದೆ ಆಗ ಖಾತೆ ಮಾಡಿಸಿಕೊಂಡಿಲ್ಲ ಆದ್ದರಿಂದ ನಮಗೆ ಇನ್ನು ವರ್ಷಾವಾರು ಖಾತೆ ಸಲ್ಲಿಸಲು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. 7/183 ರಲ್ಲಿ ನಾವು ಸ್ವಾಧೀನ ಇರುವ ಬಗ್ಗೆ ಯಾವುದಾದರೂ ವಾಸದ ದೃಢೀಕರಣ ಪತ್ರ ಕೊಟ್ಟಿರುತ್ತೇವಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಸ್ವತ್ತಿನ ಸಂಖ್ಯೆ ಇರುವುದೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ನಾವು ಇದ್ದೇವೆಂದರೆ ಸಾಕ್ಷಿಯು ಅದು ಸರಿಯಲ್ಲ ದಾವಾ ಸ್ವತ್ತು ಹಾಗೂ ನಮ್ಮ ಸ್ವತ್ತು ಒಂದೇ ಚೆಕ್ಕುಬಂದಿಯನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆಂದು ಪರಿಶೀಲನೆ ಮಾಡಲು ಕೋರ್ಟ ಕಮೀಷನರ್ ನೇಮಿಸಲು ನಮಗೆ ತಕರಾರು ಇರುತ್ತದೆ.

5. ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ಸ್ವತ್ತಿನ ಪೂರ್ವಕ್ಕೆ ರಾಮಯ್ಯರವರ ಮನೆ ಎಂದರೆ ಸರಿ. ಪಶ್ಚಿಮಕ್ಕೆ ಕರುಡಾಬೋವಿ ರವರ ಮನೆ ಎಂದರೆ ಸರಿ. ಉತ್ತರಕ್ಕೆ ಶ್ರೀನಿವಾಸ್ ರವರ ಸ್ವತ್ತು ಎಂದರೆ ಸರಿ. ದಕ್ಷಿಣಕ್ಕೆ ಸರ್ಕಾರಿ ರಸ್ತೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿದ್ದಾರೆಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿ ಇದ್ದೇವೆಂದು ನುಡಿಯುತ್ತಾರೆ. ಗೋಪಾಲಬೋವಿ ರವರು ಲೇಟ್ ವೆಂಕಟಮ್ಮ ನ ಮಗಳು ಮುನಿಯಮ್ಮ ಹಾಗೂ ಖಾಸಾ ತಮ್ಮ 15 ವರ್ಷ ವಯಸ್ಸುಳ್ಳ ಲಕ್ಷ್ಮಣಯ್ಯ ಇವರಿಂದ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿಯು ಅವರಿಗೆ ಕ್ರಯ ಮಾಡಲು ಯಾವುದೇ ಅಧಿಕಾರ ಇಲ್ಲ ಎದು ನುಡಿಯುತ್ತಾರೆ. ಮೂಗಬೋವಿ ನನಗೆ ಗೊತ್ತಿರುತ್ತಾರೆ. ಮೂಗಬೋವಿರವರಿಗೆ 4 ಜನ ಮಕ್ಕಳು ಎಂದರೆ ಸರಿ. ಮೊದಲನೇಯವರು ನಾಗಾಬೋವಿ, ತಮ್ಮಣ್ಣ ಉಃಕರುಡಾ ಎರಡನೇಯವರು, ಮೂರನೇ ಮಗಳು ವೆಂಕಟಮ್ಮ, ನಾಲ್ಕನೇ ಮಗಳು ನರಸಮ್ಮ ಎಂದರೆ ಸರಿ. ಸ್ವತ್ತು ಮೂಲತಃ ಮೂಗಾಬೋವಿ ರವರಿಗೆ ಸೇರಿರುತ್ತದೆಂದರೆ ಸರಿ. ಸಾಕ್ಷಿ ಮುಂದುವರಿದು ಮೂಗಾಬೋವಿ ರವರ ಗಂಡು ಮಕ್ಕಳಿಗೆ ಸ್ವತ್ತು ಸೇರಿರುತ್ತದೆಂದು ನುಡಿಯುತ್ತಾರೆ. ಸದರಿ ಮೂಗಾಬೋವಿ ರವರ ಮಗಳಾದ ವೆಂಕಟಮ್ಮ ರವರ ಮಗಳು ಮುನಿಯಮ್ಮ ಹಾಗೂ ಅವರ ಮೈನರ್ ತಮ್ಮ ಲಕ್ಷ್ಮಣ್ಣಯ್ಯ ರವರ ಕಡೆಯಿಂದ ದಾವಾ ಸ್ವತ್ತನ್ನು ವಾದಿ ಖರೀದಿಸಿರುತ್ತಾರೆಂದರೆ ಸಾಕ್ಷಿಯು ಅವರು 71 ರಲ್ಲಿ ಖರೀದಿ ಮಾಡಿದ್ದು ನಾವು 1956 ರಲ್ಲಿಯೇ ಖರೀದಿಸಿದ್ದೇವು ಎಂದು ನುಡಿಯುತ್ತಾರೆ.

6. ಮುನಿಯಮ್ಮ ರವರು ಖಾನೇಷುಮಾರಿ ಸಂಖ್ಯೆ 126 ಹಾಗೂ ಒಂದು ಹಳೆ ಮನೆ ಹಾಗೂ ಹಿತ್ತಲು ಇದನ್ನು ವಾದಿಗೆ ಕ್ರಯಕ್ಕೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಮುನಿಯಮ್ಮರವರಿಗೆ ಸದರಿ ಸ್ವತ್ತನ್ನು ಕೊಟ್ಟಿರುವುದಿಲ್ಲ. ಅವರ ಹೆಸರಿನಲ್ಲಿ ಯಾವುದೇ ದಾಖಲಾತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸ್ವತ್ತಿನ ಹಳೆಯ ಸಂಖ್ಯೆ 126 ಎಂದರೆ ಸರಿ. ಅದು ವಡ್ಡರದೊಡ್ಡಿ ಗ್ರಾಮಕ್ಕೆ ಹಾಗೂ ಪಂಚಾಯತಿ ವ್ಯಾಪ್ತಿಗೆ ಸೇರಿದ ನಂತರ ಖಾನೇಷಮಾರಿ ಸಂಖ್ಯೆ 7/183 ಆಗಿರುತ್ತದೆಂದರೆ ಸರಿಯಲ್ಲ ಎಂದು ನುಡಿಯುತ್ತಾರೆ. ನನಗೆ ಈ ರೀತಿ ಪಂಚಾಯತಿಗೆ ಸೇರಿದ ನಂತರ ಹೊಸ ಖಾನೆಷುಮಾರಿ ನಂಬರ್ ನೀಡಿರುವ ಬಗ್ಗೆ ಮಾಹಿತಿ ಇದ್ದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

7. ನಿಪಿ-3 ರಂತೆ ಗೋಪಾಲಬೋವಿ ಇವರ ಹೆಸರಿನಲ್ಲಿ ಖಾತೆ 7/183 ಅವರ ಹೆಸರಿನಲ್ಲಿ ಡಿಮ್ಯಾಂಡ್ ರಿಜಿಸ್ಟರ್ ನಲ್ಲಿ ನಮೂದಾಗಿರುತ್ತದೆಂದರೆ ಸಾಕ್ಷಿ ಅದು ಅವರು ಮಾಡಿಕೊಂಡಿರಬಹುದು ಆದರೆ ಅದು ಸರಿಯಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ-4 ಮತ್ತು 5 ರಲ್ಲಿಯೂ ಸಹ ಇರುತ್ತದೆಂದರೆ ಸಾಕ್ಷಿಯು ಆ ಸಂಖ್ಯೆ ಸರಿಯಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ಪಂಚಾಯತಿ ಕಡೆಯಿಂದ ಪರವಾನಿಗೆಯನ್ನು ಪಡೆದು ನಿಪಿ-4 ರಂತೆ ಅಲ್ಲಿ ಒಂದು ಸೀಟಿನ ಮನೆಯನ್ನು ಕಟ್ಟಿ ವಾಸ ಮಾಡುತ್ತಿದ್ದಾರೆಂದರೆ ಅದರಲ್ಲಿ ನಾವು ಇದ್ದೇವೆಂದು ನುಡಿಯುತ್ತಾರೆ. ನಾವು ಖಾತೆ ನಂ.7/183 ರಲ್ಲಿ ವಾಸ ವಿರುವ ಬಗ್ಗೆ ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ನಿಪಿ-6 ರಂತೆ ಗ್ರಾಮ ನಕಾಶೆಯಲ್ಲೂ ಕೂಡ ವಾದಿಯೇ ಸದರಿ ಸ್ವತ್ತಿನ ಸ್ವಾಧೀನದಲ್ಲಿರುವಂತೆ ತೋರಿಸಿರುತ್ತಾರೆಂದರೆ ಸಾಕ್ಷಿಯು ಆ ರೀತಿ ಬರೆದಿರುತ್ತಾರೆಂದು ನುಡಿಯುತ್ತಾರೆ. ಅದರಲ್ಲಿ ಪೂರ್ವ ಪಶ್ಚಿರು 21 ಅಡಿ ಉತ್ತರ ದಕ್ಷಿಣ 75 ಅಡಿ ಎಂದು ಬರೆದಿರುತ್ತಾರೆಂದರೆ ಸರಿ. ಅದರಲ್ಲಿ ಚಕ್ಕುಬಂದಿಯೂ ಸಹ ದಾವೆಯಲ್ಲಿರುವಂತೆ ಇರುತ್ತದೆಂದರೆ ಸರಿ. ಸದರಿ ದಾವಾ ಸ್ವತ್ತಿನಲ್ಲಿ ಇಂದಿಗೂ ಸಹಿತ ವಾದಿಯೇ ಸ್ವಾಧೀನದಲ್ಲಿದ್ದರೂ ಸಹಿತ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

8.ನಾವು ಅವರ ಸ್ವಾಧೀನಕ್ಕೆ ತೊಂದರೆ ಮಾಡಿದಾಗ ಗ್ರಾಮಾಂತರ ಪೋಲೀಸ್ ಠಾಣೆಗೆ ವಾದಿ ದೂರನ್ನು ಕೊಟ್ಟಿದ್ದರು ಎಂರದೆ ಸಾಕ್ಷಿ ದೂರನ್ನು ಕೊಟ್ಟಾಗ ಪೊಲೀಸರು ಹಾಗೂ ಪಂಚಾಯತಿದಾರರು ಕಲ್ಲಹಳ್ಳಿ ದೇವಸ್ಥಾನದಲ್ಲಿ ಪಂಚಾಯತಿ ಮಾಡಿ ವರದಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಅದರಂತೆ ಸದರಿ ವರದಿಯು ನಿಪಿ-7 ರಂತೆ ವಾದಿಯ ಹೆಸರಿನಲೇ ದಾವಾ ಸ್ವತ್ತು ಇರುವುದಾಗಿ ನಮೂದಿಸಿರುತ್ತಾರೆಂದರೆ ಅದು ತಪ್ಪಾಗಿ ನಮೂದಿಸಿರುತ್ತಾರೆಂದು ನುಡಿಯುತ್ತಾರೆ. ಅದರಲ್ಲಿ ವಾದಿಯು ಮನೆ ಕಟ್ಟಿರುವ ಬಗ್ಗೆ ಹೇಳಿರುತ್ತಾರೆಂದರೆ ಸಾಕ್ಷಿಯು ನಾವು ಮನೆ ಕಟ್ಟಿರುವುದು ಎಂದು ನುಡಿಯುತ್ತಾರೆ. ಕೇವಲ ಸದರಿ ಸ್ವತ್ತನ್ನು ಒಡೆದುಕೊಳ್ಳುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂರದೆ ಸರಿಯಲ್ಲ. ನಿಡಿ-1 ಮತ್ತು 2 ಸದರಿ ಸ್ವತ್ತುಗಳಿಗೂ ಪ್ರಸ್ತುತ ದಾವಾ

ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ-3 ರಿಂದ 7 ಸಹ ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನನಗೂ ಸ್ವತ್ತಿಗೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹಿತ ಅದನ್ನು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಹಾಗೂ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ವಾಟೀ ಸವಾಲಿಗೆ ಸಮಯ ಕೋರಿದ್ದು ಕೊನೆಯ ಅವಕಾಶವಾಗಿ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**